# ಜಾಣ ಕೋಣ!

■ ಪ್ರವೀಣ ಕುಲಕರ್ಣಿ



ನಮ್ಮ ರಾಜ್ಯದ ಯಾವುದೇ ದನಗಳ ಜಾತ್ರೆಯಲ್ಲಿ ಕಿಲಾರಿ ಹೋರಿಯೊಂದು ಐದು ಲಕ್ಷ ರೂಪಾಯಿಗೆ ಮಾರಾಟವಾದರೆ ರೈತರೆಲ್ಲ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುತ್ತಾರೆ. ಅದೇ ಬೆಲೆ ಹತ್ತು ಲಕ್ಷ ರೂಪಾಯಿ ದಾಟಿದರಂತೂ ಅದನ್ನೊಂದು ಸೆಲೆಬ್ರಿಟಿಯಂತೆ ಕಂಡು ಊರಲ್ಲೆಲ್ಲ ಮೆರವಣಿಗೆ ಮಾಡುತ್ತಾರೆ. ಈಗ ಥಾಯ್ಲೆಂಡ್‌ಗೆ ಬನ್ನಿ. ಇಲ್ಲಿಯ ಗುಲಾಬಿಮಿಶ್ರಿತ ಶ್ವೇತವರ್ಣದ ಕೋಣವೊಂದು ಬರೋಬ್ಬರಿ ಐದು ಲಕ್ಷ ಡಾಲರ್‌ಗೆ (4.15 ಕೋಟಿ ರೂಪಾಯಿ) ಮಾರಾಟವಾಗಿ ದಾಖಲೆ ಬರೆದಿದೆ. ಈ ಕೋಣದ ಜನಪ್ರಿಯತೆ ಯಾವ ಮಟ್ಟಕ್ಕೆ ಮುಟ್ಟಿದೆ ಎಂದರೆ ಸ್ವತಃ ಥಾಯ್ಲೆಂಡ್ ಪ್ರಧಾನಿ ಶ್ರೆಥಾ ಥಾವಿಸನ್, ಈ ಕೋಣವನ್ನು ಸರ್ಕಾರಿ ಭವನಕ್ಕೆ ಬರಮಾಡಿಕೊಂಡು, ಆತಿಥ್ಯ ನೀಡಿದ್ದಾರೆ. ಕೋಣದಷ್ಟೇ ಎತ್ತರ ಕಾಯದ ಪ್ರಧಾನಿ, ಅದರ ಮೂಗಿಗೆ ಮೂಗು ತಾಗಿಸಿ ಪ್ರೀತಿಯಿಂದ ಸ್ವಾಗತ ಕೋರಿರುವುದು ಜಗತ್ತಿನಾದ್ಯಂತ ದೊಡ್ಡ ಸುದ್ದಿಯಾಗಿದೆ.

ಅಂದಹಾಗೆ, ಈ ಬಿಳಿ ಕೋಣದ ಹೆಸರು 'ಕೋ ಮುವಾಂಗ್ ಫೆಟ್' ಎಂದು. ಥಾಯ್‌ನ ಕೃಷಿಕ ವಲಯದಲ್ಲಿ ಇದೊಂದು ಒಳ್ಳೆಯ ತಳಿ ಅಭಿವೃದ್ಧಿಗೆ ಪೂರಕ ಕೋಣವೆಂದೇ ಹೆಸರಾಗಿದೆ. ಹಳ್ಳಿಯ ತನ್ನ ನೆಲೆಯಿಂದ ಬ್ಯಾಂಕಾಕ್‌ನ ಸರ್ಕಾರಿ ಭವನಕ್ಕೆ ಬಲು ಗತ್ತಿನಿಂದ ಬಂದಿದ್ದ ಈ ಕೋಣವನ್ನು ಸ್ವಾಗತಿಸಲು ಪ್ರಧಾನಿ ಜತೆಗೆ ಇಡೀ ಸರ್ಕಾರಿ ಆಡಳಿತ ಯಂತ್ರವೇ ಸನ್ನದ್ಧವಾಗಿ ನಿಂತಿತ್ತು. 6 ಅಡಿ ಎತ್ತರದ ಈ ಕೋಣದ ತೂಕ 1.4 ಟನ್. ಸಾಮಾನ್ಯ ಕೋಣಕ್ಕಿಂತಲೂ ಇದು ಮೂರು ಪಟ್ಟು ಹೆಚ್ಚಿನ ತೂಕವಾಗಿದೆ.

ಕೋ ಮುವಾಂಗ್ ಫೆಟ್ ಈಗಾಗಲೇ ಟಿ.ವಿ. ಸೆಲೆಬ್ರಿಟಿ ಆಗಿಬಿಟ್ಟಿದೆ. 'ಸೌಂಡ್ ಫ್ರಮ್ ದಿ ಫೀಲ್ಡ್ ಆಫ್ ಲವ್' ಟಿ.ವಿ. ಶೋದಲ್ಲಿ ಅದು ಪ್ರಧಾನ ಪಾತ್ರದಲ್ಲಿ ಅಭಿನಯಿಸಿದೆ. 'ಇಂತಹ ಸುರಸುಂದರಾಂಗ ಕೋಣ ಮತ್ತೊಂದಿಲ್ಲ. ಅಬ್ಬಾ! ಎಷ್ಟು ಸುಂದರವಾಗಿದೆ ನೋಡಿ' ಎಂದು ಕೋ ಮುವಾಂಗ್ ಫೆಟ್‌ನ ಕೋಡುಗಳನ್ನು ಸವರುತ್ತಾ ಥಾಯ್ ಪ್ರಧಾನಿ ಮೆಚ್ಚುಗೆಯ ಮಾತುಗಳನ್ನಾಡುತ್ತಾರೆ. ಆಗ ಈ ಕೋಣದ ಬಾಗಿದ ಕೋಡುಗಳು ಹೆಮ್ಮೆಯಿಂದ ನೆಟ್ಟಗೆ ನಿಂತಂತೆ ಭಾಸವಾಗುತ್ತವೆ.

ಕಪ್ಪು ಎಮ್ಮೆ–ಕೋಣಗಳ ಸಂತತಿ ಥಾಯ್ಲೆಂಡ್‌ನಲ್ಲೂ ಸಾಮಾನ್ಯ. ಸದಾ ನೀರಿನ ಒಡನಾಡಿಯಾದ ಈ ಎಮ್ಮೆ–ಕೋಣಗಳು ಅಲ್ಲಿನ ಹಳ್ಳಿ–ಹಳ್ಳಿಯಲ್ಲೂ ಸಿಗುತ್ತವೆ. ಆದರೆ, ಬಿಳಿ ಕೋಣ ಸಿಗುವುದು ತೀರಾ ಅಪರೂಪ. ಹೀಗಾಗಿ ನಾಲ್ಕು ವರ್ಷದ ಕೋ ಮುವಾಂಗ್ ಫೆಟ್‌ಗೆ ಎಲ್ಲಿಲ್ಲದ ಬೇಡಿಕೆ. ಸರ್ಕಾರದ 'ಸಾಫ್ಟ್ ಪವರ್' ನೀತಿಯ ರಾಯಭಾರಿಯಾಗಿಯೂ ಈ ಕೋಣ ಆಯ್ಕೆಯಾಗಿದೆ. ಈ ಕೋಣವನ್ನು ಕಂಡವರೆಲ್ಲ 'ವಾವ್, ಬ್ಯೂಟಿಫುಲ್' ಎಂದು ಉದ್ಗಾರ ತೆಗೆಯುತ್ತಿದ್ದಾರೆ. ಅದರ ಸೌಂದರ್ಯಕ್ಕೆ ಮಾರುಹೋಗಿದ್ದಾರೆ. ಇಂತಹ ಅತಿಲೋಕ ಸುಂದರ ಕೋಣ ಸಿಕ್ಕಿರುವುದೇ ನಮ್ಮ ಅದೃಷ್ಟ ಎಂದು ಬೀಗುತ್ತಿದ್ದಾರೆ.

ವಾನ್‌ಸುವಾನ್ ಎಂಬ ಫಾರ್ಮ್‌ನ ಜಿತ್ತಾನಾಟ್ ಲಿಮ್ತೊಂಗ್‌ಕುಲ್ ಎಂಬುವವರು ಈ ಕೋಣದ ಮಾಲೀಕರು. ಕೋಣದ ನೀಳವಾದ ಹಗ್ಗವನ್ನು ಹಿಡಿದುಕೊಂಡು, ಎದೆಯುಬ್ಬಿಸಿಕೊಂಡು ಬರುವ ಜಿತ್ತಾನಾಟ್, ತಮ್ಮ ಫಾರ್ಮ್‌ಗೆ ಪ್ರತಿದಿನ ನೂರಾರು ಸಂಖ್ಯೆಯಲ್ಲಿ ರೈತರು ಈ ಕೋಣ ನೋಡಲು ಬರುವುದುಂಟು ಎನ್ನುತ್ತಾರೆ. 'ನನ್ನ ಫಾರ್ಮ್ ಈಗ ಒಂದು ಪ್ರವಾಸಿ ಕೇಂದ್ರವಾಗಿದೆ. ಬಂದವರೆಲ್ಲ ಕೋ ಮುವಾಂಗ್ ಫೆಟ್ ಜತೆ ಫೋಟೊ ತೆಗೆಸಿಕೊಂಡೇ ಹೋಗುತ್ತಾರೆ' ಎಂದು ಹೆಮ್ಮೆಯಿಂದ ವಿವರಿಸುತ್ತಾರೆ. ಕ್ವಿಂಟಲ್‌ಗಟ್ಟಲೆ ಹಸಿಹುಲ್ಲು, ಹಿಂಡಿ ಸೇರಿದಂತೆ ಪೌಷ್ಟಿಕ ಆಹಾರ ಮೆಲ್ಲುವ ಈ ಕೋಣಕ್ಕೆ ಫಾರ್ಮ್‌ನಲ್ಲಿ ರಾಜವೈಭೋಗವೇ ಇದೆಯಂತೆ.

ಕೋ ಮುವಾಂಗ್ ಫೆಟ್‌ನ ಆಕಾರವನ್ನು ಕಂಡು ಗಾಬರಿ ಆದವರಿಗೆ ಜಿತ್ತಾನಾಟ್ ಬಲು ಸೊಗಸಾಗಿ ಅದರ ಮನೋಧರ್ಮವನ್ನು ವಿವರಿಸುತ್ತಾರೆ. 'ನಮ್ಮ ಈ ಕೋಣ ಬಲು ಜಾಣ. ಹಾಗೆಲ್ಲ ದೊಂಬಿ ಕೃತ್ಯದಲ್ಲಿ ತೊಡಗುವುದಿಲ್ಲ. ತುಂಬಾ ಶಾಂತ. ನೀರಿನಲ್ಲಿ ಇರಲು ಅದಕ್ಕೆ ಇಷ್ಟ. ತಳಿ ಅಭಿವೃದ್ಧಿ ಕೆಲಸದಲ್ಲಿ ಮಗ್ನವಾದಾಗ ಮಾತ್ರ ಅಷ್ಟೇ ಶಕ್ತಿಶಾಲಿ. ನೋಡಿ, ಹೇಗಿದೆ ನಮ್ಮ ಈ ಹೀರೊ' ಎಂದು ನಗುತ್ತಾರೆ. ಕೋ ಮುವಾಂಗ್ ಫೆಟ್‌ಗೆ ಈಗಷ್ಟೇ ನಾಲ್ಕರ ಹರೆಯ. ಅದಕ್ಕೆ ಏಳು ವರ್ಷವಾಗುವ ಹೊತ್ತಿಗೆ ತೂಕ 1.8 ಟನ್‌ಗೆ ತಲುಪಬಹುದು ಎಂಬ ಅಂದಾಜಿದೆ. ಸಾಮಾನ್ಯವಾಗಿ ಕೋಣಗಳು 30 ವರ್ಷದಿಂದ 40 ವರ್ಷದವರೆಗೆ ಬದುಕುತ್ತವೆ. ಈ ಸೆಲೆಬ್ರಿಟಿ ಹೆಚ್ಚು ಕಾಲ ಬದುಕಬೇಕು ಎನ್ನುವುದು ಥಾಯ್ ಜನರ ಅಪೇಕ್ಷೆ. 'ನಮ್ಮ ಕೋಣ ದೀರ್ಘಾಯುವಾಗಿ ನಮ್ಮ ಜತೆಗಿರಲಿದೆ ಬಿಡಿ' ಎಂದು ಜಿತ್ತಾನಾಟ್ ಸಹ ಹೇಳುತ್ತಾರೆ.

ಬಿಳಿ ಕೋಣಗಳ ಸಂತಾನಾಭಿವೃದ್ಧಿಗೆ ಸರ್ಕಾರದಿಂದ ಇನ್ನಷ್ಟು ಉತ್ತೇಜಕ ಕ್ರಮಗಳನ್ನು ಜರುಗಿಸಬೇಕಿದೆ. ಚೀನಾ, ವಿಯೆಟ್ನಾಂನಲ್ಲೂ ಜನಪ್ರಿಯವಾಗಿರುವ ಈ ಕೋಣಗಳ ವಹಿವಾಟಿನಲ್ಲಿ ದೊಡ್ಡ ಲಾಭವಿದೆ ಎಂಬುದು ಅಲ್ಲಿನ ರೈತರ ಅಭಿಮತ. ಪ್ರಧಾನಿ ಥಾವಿಸನ್, ಈ ಕೋಣದಿಂದ ಎಷ್ಟೊಂದು ಪ್ರಭಾವಿತರಾಗಿದ್ದಾರೆ ಎಂದರೆ, ಚೀನಾದಲ್ಲಿ ನಮ್ಮ ಕೋಣಗಳ ಒಂದು ರೋಡ್ ಶೋ ನಡೆಸಿಯೇ ಬಿಡುವಾ ಎಂದು ಘೋಷಿಸಿದ್ದಾರೆ. ಅಲ್ಲಿನ ಸರ್ಕಾರದ ಜತೆ ಚರ್ಚಿಸಿ, ಅನುಮತಿ ಪಡೆಯಲು ಸಚಿವರೊಬ್ಬರನ್ನು ನೇಮಕ ಕೂಡ ಮಾಡಿದ್ದಾರೆ! ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65